ದಿನಾಂಕಃ 07.09.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಮತಿ.ಬಿಪಿ ವಕೀಲರಿಂದ ಪಿರ್ಯಾದಿ ಪರವಾಗಿ.

ನನ್ನ ಮುಖ್ಯ ವಿಚಾರಣೆಯಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ.

ಎರಡು ಚೆಕ್ಕುಗಳನ್ನು ಮತ್ತು ಬ್ಯಾಂಕಿನಿಂದ ಕೊಟ್ಟಿರುವ ಒಂದು ಹಿಂಬರಹವನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಈಗಾಗಲೇ ನಿಪಿಃ1 ರಿಂದ 3 ಎಂದು ಗುರುತಿಸಲಾಗಿದ್ದು ವಕೀಲರ ಮೂಲಕ ಕಳುಹಿಸಿರುವ ನೋಟೀಸಿನ ಕಚೇರಿ ಪ್ರತಿ ಹಾಗೂ ಒಂದು ಅಂಚೆ ರಶೀದಿ ಮತ್ತು ವಾಪಸ್ಸು ಬಂದಿರುವ ಒಂದು ಅಂಚೆ ಲಕೋಟೆಯನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಈಗಾಗಲೇ ನಿಪಿಃ4 ರಿಂದ 6 ಎಂದು ಗುರುತಿಸಲಾಗಿದ್ದು, ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ಹೊಡೆದು ನೋಡಲಾಯಿತು ಅದರಲ್ಲಿರುವ ನೋಟೀಸನ್ನು ನಿಪಿಃ6 (ಎ) ಎಂದು ಗುರುತಿಸಲಾಯಿತು. ಈ ದಿನ ಒಂದು ಮೆಮೋರಾಂಡಮ್ ಆಪ್ ಸ್ಟಾಂಡಿಂಗ್ ಮತ್ತು ಒಂದು ನೋಂದಣಿಯಾಗದ ಹಾಗೂ ಸ್ವಾದೀನ ರಹಿತ ಕ್ರಯದ ಕರಾರುಪತ್ರವನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿಃ7 ಮತ್ತು8 ಎಂದು ಗುರುತಿಸಲಾಯಿತು. ಆದ್ದರಿಂದ ಆರೋಪಿಗೆ ಶಿಕ್ಷೆ ವಿಧಿಸಿ ಚೆಕ್ಕಿನ ಹಣವನ್ನು ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀಸವಾಲುಃ ಶ್ರೀ.ಪಿಎಸ್ ವಕೀಲರಿಂದ

ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ